ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕರ್ನಾಟಕ ನೀರಾವರಿ ನಿಗಮ ನಿಯಮಿತ
ನೋಂದಾಯಿತ ಕಛೇರಿ, ೪ನೇ ಮಹಡಿ, ಕಾಫಿ ಮಂಡಳಿ ಕಟ್ಟಡ ನಂ.೧
ಡಾ:ಬಿ.ಆರ್. ಅಂಬೇಡ್ಕರ್ ವೀಧಿ,ಬೆಂಗಳೂರು-೫೬೦೦೦೧
CIN No. U85110KA1998 SGC024503
Ph080-22283074-78 Fax-080 22386015
e-mail Knnlindia.com
Website:www. Knnlindia.com

ಕಾರ್ಯಪಾಲಕ ಅಭಿಯಂತರರವರಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ
ದಂಡಾವತಿ ಜಲಾಶಯ ಯೋಜನಾ ವಿಭಾಗ
ಶಿಕಾರಿಪುರ.
Phone: 08187- 222206

ಸಂಖ್ಯೆ:ಕಾ.ಇಂ/ಕನೀನಿನಿ/ದಂ.ಜ.ಯೋ.ವಿ/ಶಿ/2021-22/ 1008 ದಿನಾಂಕ: 09/09/2021

ಇವರಿಗೆ,
ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ

ಮಾನ್ಯರೇ,

ವಿಷಯ:- Diversion of 4.966 Ha of Forest land for Construction of Rising Main Gravity Feeder and delivery chamber in Kotipura and other villages of shikaripura taluk of Shivamogga District comes under Sagara Forest Division to fill 41 MI/ZP tanks and providing irrigation for 3430 Ha of command area of Shikaripura and Soraba Taluks by lifting 0.429 TMC of water from Kumadvathi River under Kasaba LIS Project-Rgf.

ಉಲ್ಲೇಖ:- 1) ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ಅರಣ್ಯ ವಿಭಾಗ ಸಾಗರ ಇವರ ಕಛೇರಿ ಪತ್ರ ಸಂಖ್ಯೆ:3670 ದಿನಾಂಕ: 02/09/2021.
2) ಸ.ಕಾ.ಇಂ, ಕನೀನಿನಿ, ನಂ.1 ದಂ.ಜ.ಯೋ ಉಪ ವಿಭಾಗ ಶಿಕಾರಿಪುರ ಇವರ ಪತ್ರ ಸಂಖ್ಯೆ:303 ದಿನಾಂಕ:09/09/2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಕಸಬಾ ಏತ ನೀರಾವರಿ ಯೋಜನೆಯಡಿಯಲ್ಲಿ ವಲಯ ಅರಣ್ಯಾಧಿಕಾರಿಗಳು, ಅಂಬ್ಲಿಗೊಳ ವಲಯ ಅಂಬ್ಲಿಗೊಳ ಇವರು ಸಿಬ್ಬಂದಿಗಳೊಂದಿಗೆ ಪ್ರಸ್ತಾವನೆಯಲ್ಲಿ ನಮೂದಿಸಿದ ಸ್ಥಳಗಳಿಗೆ ಭೇಟಿ ನೀಡಿ ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ನಕಾಶೆಯಂತೆ ಸ್ಥಳ ಪರಿಶೀಲಿಸಿರುತ್ತಾರೆ. ಸ್ಥಳ ಪರಿಶೀಲನಾ ವರದಿಯಂತೆ ಶಿಕಾರಿಪುರ ತಾಲ್ಲೂಕು ಕಸಬಾ ಹೋಬಳಿ ಹೋತನಕಟ್ಟೆ ಗ್ರಾಮ ಸರ್ವೆ ನಂಬರ್ 72 ರಲ್ಲಿ ಇರುವ ಬೆಳ್ಳಂದೂರು ರಾಜ್ಯ ಅರಣ್ಯ ಮತ್ತು ಬನ್ನೂರು ಕಿರು ಅರಣ್ಯ ಪ್ರದೇಶದಲ್ಲಿ ಸದರಿ ಪೈಪ್‌ಲೈನ್‌ನ ಉದ್ದ 766 ಮೀ ಎಂದು ಪ್ರಸ್ತಾವನೆಯಲ್ಲಿ ಸಲ್ಲಿಸಲಾಗಿತ್ತು, ಆದರೆ ಸ್ಥಳದಲ್ಲಿ ಸದರಿ ಪೈಪ್‌ಲೈನ್ ಉದ್ದ 817 ಮೀ ಇರುವುದಾಗಿ ತಿಳಿಸುತ್ತಾ 51 ಮೀ ಉದ್ದ ಹೆಚುವರಿಯಾಗಿರುವುದಾಗಿ ವಲಯ ಅರಣ್ಯಾಧಿಕಾರಿಗಳು ಅಂಬ್ಲಿಗೊಳ ವಲಯ ಅಂಬ್ಲಿಗೊಳ ಇವರು ತಿಳಿಸಿರುತ್ತಾರೆ ಎಂದು ವರದಿಸಿರುತ್ತೀರಿ.

ಮುಂದುವರೆದು, ಈ ಹಿಂದೆ ಮೋಜಣಿ ನಡೆಸಿದಾಗ ಸದರಿ ಸ್ಥಳದಲ್ಲಿ ಮಳೆಗಾಲವಾದ ಕಾರಣ ಗಿಡ-ಗಂಟಿಗಳು ಬೆಳೆದು ನಿಖರವಾಗಿ ಸರ್ವೆ ನಡೆಸಲು ಸಾಧ್ಯವಾಗಿರುವುದಿಲ್ಲ. ಆದರಿಂದ ತಾವು ಸೂಚಿಸಿದಂತೆ ದಿನಾಂಕ: 09/09/2021 ರಂದು ಅಂಬ್ಲಿಗೊಳ ವಲಯ ಮತ್ತು ಶಿರಾಳಕೊಪ್ಪ ವಲಯದ, ವಲಯ ಅರಣ್ಯಾಧಿಕಾರಿಗಳೊಂದಿಗೆ ಮರು ಮೋಜಣಿ ನಡೆಸಿದಾಗ ಶಿಕಾರಿಪುರ ತಾಲ್ಲೂಕು ಕಸಬಾ ಹೋಬಳಿ ಹೋತನಕಟ್ಟೆ ಗ್ರಾಮ ಸರ್ವೆ ನಂಬರ್ 72 ರಲ್ಲಿ ಇರುವ ಬೆಳ್ಳಂದೂರು ರಾಜ್ಯ ಅರಣ್ಯ ಮತ್ತು ಬನ್ನೂರು ಕಿರು ಅರಣ್ಯ ಪ್ರದೇಶದಲ್ಲಿ ಸದರಿ ಪೈಪ್‌ಲೈನ್‌ನ ಉದ್ದ 766 ಮೀ ಇರುತ್ತದೆ ಎಂದು ಮೋಜಣಿ ನಡೆಸಿದಾಗ ತಿಳಿದು ಬಂದಿರುತ್ತದೆ. ಪ್ರಸ್ತಾಪಿತ ಯೋಜನೆಯಲ್ಲಿ ನಿಖರವಾಗಿ ಬಳಕೆಯಾಗುವ ಅರಣ್ಯ ಪ್ರದೇಶದ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಪರಿಷ್ಕೃತ ಯೋಜನಾ ನಕಾಶೆಗಳನ್ನು (ಟೋಪೋ ಮತ್ತು ಗ್ರಾಮ ನಕಾಶೆ) ತಯಾರಿಸಿ ಹಾಗೂ ಪರಿವೇಶ್ ತಂತ್ರಾಂಶದ ಪಾರ್ಟ್-01 ರಲ್ಲಿ ಯಾವುದೇ ತಿದ್ದುಪಡಿ ಮಾಡದಂತೆ ಪ್ರಸ್ತಾವನೆಯನ್ನು ಉಲ್ಲೇಖ (2) ರ ಪತ್ರದನ್ವಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.1 ದಂಡಾವತಿ ಜಲಾಶಯ ಯೋಜನೆ ಉಪ ವಿಭಾಗ ಶಿಕಾರಿಪುರ ಇವರು ಸಲ್ಲಿಸಿರುತ್ತಾರೆ.

Scanned By Scanner Go

ಮುಂದುವರೆದು, ಸದರಿ ಪ್ರಸ್ತಾವನೆಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ತಮ್ಮ ಆದ್ಯ ಅವಗಾಹನೆಗಾಗಿ ಈ ಮೂಲಕ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ
ಸಹಿ/-
ಕಾರ್ಯಪಾಲಕ ಇಂಜನಿಯರ್,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ,
ಶಿಕಾರಿಪುರ.

ಸಹಾಯಕ ಕಾರ್ಯಪಾಲಕ ಇಂಜನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.1 ದಂಡಾವತಿ ಜಲಾಶಯ ಯೋಜನೆ ಉಪ ವಿಭಾಗ ಶಿಕಾರಿಪುರ ಇವರಿಗೆ ಕಳುಹಿಸಿದೆ.

ಕಾರ್ಯಪಾಲಕ ಇಂಜನಿಯರ್,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ,
ಶಿಕಾರಿಪುರ.

Scanned By Scanner Go